ಸೈನಿಕರ ದೇಹದೊಳಗೆ ಸಾಗಿಹೋಗಿರುವ ಗುಂಡು, ಹರಿತವಾದ ಲೋಹದ ತುಣುಕುಗಳು ಮತ್ತು ಅವರ ಮುರಿದ ಮೂಳೆಗಳನ್ನು ಕ್ಷ–ಕಿರಣಗಳ ಸಹಾಯದಿಂದ ನೋಡಬಹುದು ಎಂದು ಮೇರಿ ಅರಿತಿದ್ದಳು. ಅದಕ್ಕಾಗಿ ಯುದ್ಧಭೂಮಿಯಲ್ಲಿ ಸಂಚಾರಿ ರೇಡಿಯಾಲಜಿ ಕೇಂದ್ರಗಳನ್ನು ತೆರೆಯುವಂತೆ ಸರ್ಕಾರದ ಮನವೊಲಿಸಿದಳು. ಅಲ್ಲದೆ ಈ ಯೋಜನೆಯ ನಿರ್ದೇಶಕಿಯಾಗಿಯೂ ಮೇರಿ ಕಾರ್ಯನಿರ್ವಹಿಸಿದಳು. ವಾಹನಗಳ ಕವಚನಿರ್ಮಾಪಕರಿಂದ ಕಾರುಗಳನ್ನು ವ್ಯಾನುಗಳನ್ನಾಗಿ ಪರಿವರ್ತಿಸಿಕೊಂಡಳು. ಹಾಗೆಯೇ ದೇಶಸೇವೆಗಾಗಿ ಹಲವಾರು ಉಪಕರಣಗಳನ್ನು ನೀಡುವಂತೆ ಅವರಿಗೆ ಮನವಿ ಮಾಡಿಕೊಂಡಳು. ೧೯೧೪, ಅಕ್ಟೋಬರ್ ತಿಂಗಳಿನಲ್ಲಿ ೨೦ ರೇಡಿಯಾಲಜಿ ಕೇಂದ್ರಗಳು ಸೇವೆಗೆ ಸನ್ನದ್ಧವಾದುವು. ಈ ಎಲ್ಲ ವಾಹನಗಳನ್ನೂ ಯುದ್ಧದ ಮುಂಚೂಣಿ ಪ್ರದೇಶಕ್ಕೆ ತೆಗೆದುಕೊಂಡು ಹೋಗಲಾಯಿತು. ಮೇರಿಯ ಜೊತೆಗೆ ಅವಳ ಮಗಳು, ೧೭ ವರ್ಷದ ಐರಿನ್ ಕೂಡ ಸಹಾಯಕಿಯಾಗಿ ಸೇರಿಕೊಂಡಳು. ಅವರ ಜೊತೆಗೆ ಒಬ್ಬ ಸೇನಾವೈದ್ಯನೂ ಇದ್ದ. ಅವರೆಲ್ಲರೂ ಯುದ್ಧದಲ್ಲಿ ಗಾಯಗೊಂಡ ಪ್ರತಿಯೊಬ್ಬ ಸೈನಿಕನನ್ನೂ ತುಂಬ ಆಸ್ಥೆಯಿಂದ ಶುಶ್ರೂಷೆ ಮಾಡಿದರು.

**ಕಡೆಯ ದಿನಗಳು:** ತನ್ನ ಜೀವಿತದ ಕಡೆಯ ಹತ್ತು ವರುಷಗಳಲ್ಲಿ ಮೇರಿ ತನ್ನ ಮಗಳು ಮತ್ತು ಅಳಿಯ – ಇಬ್ಬರೂ ಅತ್ಯಂತ ಪರಿಶ್ರಮಪಟ್ಟು ಸಂಶೋಧನೆ ನಡೆಸುತ್ತಿರುವುದನ್ನು ಕಂಡು ಸಂತೋಷಪಟ್ಟಳು. ತನ್ನ ಅಗಾಧ ಸಾಧನೆಯಿಂದ ಜೀವನದಲ್ಲಿ ತೃಪ್ತಿಯನ್ನು ಕಂಡುಕೊಂಡ ಮೇರಿ, ೧೯೩೪, ಜುಲೈ ೪ರಂದು ಕೊನೆಯುಸಿರೆಳೆದಳು. ಒಂದು ವರ್ಷದ ತರುವಾಯ, ೧೯೩೫ ರಲ್ಲಿ, ಮೇರಿಯ ಹಿರಿಯ ಮಗಳು ಐರಿನ್ ತನ್ನ ಪತಿಯೊಡನೆ ನೊಬೆಲ್ ಪಾರಿತೋಷಕವನ್ನು ಹಂಚಿಕೊಂಡಳು. ಕಿರಿಯ ಮಗಳು ಈವ್ ಅಮೆರಿಕದ ರಾಯಭಾರಿಯೊಬ್ಬನನ್ನು ಮದುವೆಯಾಗಿ ನೆಮ್ಮದಿಯ ಸಂಸಾರವನ್ನು ಸಾಗಿಸುತ್ತಿದ್ದಳು. ಹೀಗೆ ಮೇರಿ ಕ್ಯೂರಿ ವೈಜ್ಞಾನಿಕ ಕ್ಷೇತ್ರದಲ್ಲಿ ಹೊಸ ಮಾರ್ಗವೊಂದನ್ನು ಹುಟ್ಟು ಹಾಕಿದ್ದಾಳೆ. ಎಲ್ಲ ವಿದ್ಯಾರ್ಥಿಗಳಿಗೂ, ವಿಜ್ಞಾನಿಗಳಿಗೂ ಇಂದಿಗೂ ಸ್ಫೂರ್ತಿಯ ಸೆಲೆಯಾಗಿ ಬೆಳಗುತ್ತಿದ್ದಾಳೆ. ❐

## ಸ್ನೇಹಪ್ರಭ

**ಕುಟುಂಬದಲ್ಲಿ, ಅಲ್ಲಿನ ವಿವಿಧ ಸದಸ್ಯರ ಆವಶ್ಯಕತೆಗಳನ್ನು ತೀರಿಸಬೇಕಾದ ಅನಿವಾರ್ಯತೆ ಇರುತ್ತದೆ. ಹೀಗಾಗಿ ಇಂಥ ಪರಿಸ್ಥಿತಿಯಲ್ಲಿ 'ವೈರಾಗ್ಯ', 'ತ್ಯಾಗ' ಮುಂತಾದ ಆಧ್ಯಾತ್ಮಿಕ ಭಾವನೆಗಳಿಗೆ ಎಲ್ಲಿ ತಾನೆ ಸ್ಥಾನವಿದೆ? ಅವುಗಳನ್ನು ಪಾಲಿಸುವುದು ಅಸಾಧ್ಯ ಎಂದೆನಿಸುವುದಿಲ್ಲವೆ?**

ಕುಟುಂಬದ ವಿವಿಧ ಸದಸ್ಯರ ಆವಶ್ಯಕತೆಗಳನ್ನು ಪೂರೈಸಬೇಕಾದರೆ ತ್ಯಾಗದ ಆವಶ್ಯಕತೆ ಇದೆ. ವೈಯಕ್ತಿಕ ತ್ಯಾಗವಿಲ್ಲದೆ ಇತರರ ಆವಶ್ಯಕತೆಗಳಿಗೆ ಸ್ಪಂದಿಸುವುದು ಹೇಗೆ ಸಾಧ್ಯ? ಎಷ್ಟೋ ಸಂದರ್ಭಗಳಲ್ಲಿ ಇತರರಿಗಾಗಿ ನಮ್ಮ ಸಮಯವನ್ನು ತ್ಯಾಗ ಮಾಡಬೇಕಾಗುತ್ತದೆ. ಇತರರ ಕಷ್ಟವನ್ನು ಕೇಳುವುದಕ್ಕಾದರೂ ನಮಗೆ ತಾಳ್ಮೆ ಇರಬೇಕಾಗುತ್ತದೆ. ಈ ತಾಳ್ಮೆಯು ತ್ಯಾಗದಿಂದಲೇ ಬರುವಂತಹುದು. ಇತರರಿಗೆ ಸಹಾಯ ಮಾಡಲು ನಮ್ಮ ಸಮಯವನ್ನು ತ್ಯಾಗ ಮಾಡಬೇಕಾಗುತ್ತದೆ. ಹಾಗೆಯೇ ನಮಗೆ ಪ್ರಿಯವಾದ ಎಷ್ಟೋ ವಿಷಯಗಳನ್ನು ತ್ಯಾಗ ಮಾಡಬೇಕಾಗಬಹುದು. ನಮಗೆ ತುಂಬ ಪ್ರಿಯವಾದ ಯಾವುದೊ ಟಿ.ವಿ. ಕಾರ್ಯಕ್ರಮವನ್ನು ತ್ಯಾಗ ಮಾಡಬೇಕಾಗಬಹುದು. ಇತರರನ್ನು ನೋಡಿಕೊಳ್ಳಲು, ಶುಶ್ರೂಷೆ ಮಾಡಲು ನಮ್ಮ ಎಷ್ಟೋ ಸುಖ ಸೌಲಭ್ಯಗಳನ್ನು ತ್ಯಾಗ ಮಾಡಬೇಕಾಗಬಹುದು. ಇತರರಿಗಾಗಿ ಅಥವಾ ಒಟ್ಟು ಕುಟುಂಬದ ಒಳಿತಿಗಾಗಿ ನಮ್ಮ ಸ್ವಂತ ಇಚ್ಛೆಯನ್ನೇ ತ್ಯಾಗ ಮಾಡಬೇಕಾಗಬಹುದು. ಹೀಗೆ ಎಲ್ಲಾ ಸಂದರ್ಭಗಳಲ್ಲಿಯೂ ತ್ಯಾಗದ ಆವಶ್ಯಕತೆ ಇದೆ. ತ್ಯಾಗಮನೋಭಾವವಿಲ್ಲದೆ ಯಾವುದೇ ಕುಟುಂಬವಾಗಲಿ, ಸಂಸ್ಥೆಯಾಗಲಿ ಸರಿಯಾಗಿ ನಡೆಯಲಾರದು.

ಶ್ರೀಮಂತ ಮನೆತನದ ಬಾಲಕಿಯೊಬ್ಬಳು ಪೆನ್ಸಿಲ್ ಪೆಟ್ಟಿಗೆಯನ್ನು ಕೊಂಡುಕೊಳ್ಳಲು ಒಂದು ಅಂಗಡಿಗೆ ಹೋದಳು. ಆಕೆಯು ಪೆಟ್ಟಿಗೆಯನ್ನು ತೆಗೆದುಕೊಳ್ಳುತ್ತಿರುವಾಗ ತುಂಬಾ ಬಡ ಬಾಲಕಿಯೊಬ್ಬಳು ತಾನೂ ಒಂದು ಪೆನ್ಸಿಲ್ ಕೊಂಡುಕೊಳ್ಳಲು ಅಂಗಡಿಗೆ ಬಂದಳು. ಅಂಗಡಿಯವನು ಒಂದು ಪೆನ್ಸಿಲ್‌ನ ಬೆಲೆಯನ್ನು ತಿಳಿಸಿದಾಗ ಆ ಬಡ ಬಾಲಕಿಯು ತನ್ನಲ್ಲಿರುವ ಹಣವನ್ನು ಎಣಿಸುತ್ತಾಳೆ. ಆದರೆ ಒಂದು ಪೆನ್ಸಿಲ್ ಕೊಂಡುಕೊಳ್ಳುವಷ್ಟು ಹಣವೂ ಅವಳ ಹತ್ತಿರ ಇರಲಿಲ್ಲ. ಅವಳು ಪೆನ್ಸಿಲ್ ಬೇಡವೆಂದು ಹಿಂದಿರುಗುವವಳಿದ್ದಳು. ಆಗ ಶ್ರೀಮಂತ ಬಾಲಕಿ ತನ್ನ ಪೆಟ್ಟಿಗೆಯಿಂದ ಒಂದು ಪೆನ್ಸಿಲ್ ಅನ್ನು ತೆಗೆದು ಅವಳಿಗೆ ಕೊಟ್ಟಳು. ಅವಳು ಅದನ್ನು ತೆಗೆದುಕೊಂಡು, ಅದನ್ನು ಎಚ್ಚರಿಕೆಯಿಂದ ಎರಡು ಭಾಗ ಮಾಡಿದಳು. ಒಂದನ್ನು ತಾನಿಟ್ಟುಕೊಂಡು ಉಳಿದ ಭಾಗವನ್ನು ಕಾಯುತ್ತಿದ್ದ ಇನ್ನೊಬ್ಬಳು ಬಡ ಹುಡುಗಿಗೆ ನೀಡಿದಳು. ಶ್ರೀಮಂತ ಬಾಲಕಿಗೆ ಧನ್ಯವಾದವನ್ನು ಅರ್ಪಿಸಿ ಹೊರಟುಹೋದಳು (*'Frozen Thought'*, page 86, February 2011). ಈ ರೀತಿಯ ತ್ಯಾಗಮನೋಭಾವವೇ ಕುಟುಂಬದ ಶ್ರೀರಕ್ಷೆ. ಮಕ್ಕಳಲ್ಲಿ ಸ್ವಾಭಾವಿಕವಾಗಿ ಈ ಮನೋಭಾವವಿರುತ್ತದೆ. ಆದರೆ ಹಿರಿಯರ ಸಹವಾಸದಿಂದ, ಕೆಲವೊಮ್ಮೆ ಅವರ ತರಬೇತಿಯಿಂದಲೂ, ಮಕ್ಕಳು ಬೆಳೆದಂತೆಲ್ಲಾ ಸ್ವಾರ್ಥಿಗಳಾಗುತ್ತಾರೆ. ಹಿರಿಯರು ಮಕ್ಕಳನ್ನು ಸ್ವಾರ್ಥಿಗಳನ್ನಾಗಿ ಮಾಡಿ ಕಡೆಗೆ ಆ ಸ್ವಾರ್ಥಕ್ಕೆ ತಾವೇ ಬಲಿಯಾಗುತ್ತಾರೆ.

ತ್ಯಾಗಮನೋಭಾವವೆಂದರೆ, ತನ್ನ ಆವಶ್ಯಕತೆಯನ್ನೂ ಮೀರಿ ಇತರರ ಆವಶ್ಯಕತೆಯನ್ನು ಪರಿಭಾವಿಸುವ ಸಾಮರ್ಥ್ಯ. ಇದು ಎಲ್ಲರಿಗೂ, ಸಾಧುಗಳಿಗೂ ಕೂಡ, ಅತ್ಯಂತ ಅವಶ್ಯಕ. ಇದರ ಕೊರತೆಯಿಂದಲೇ ಕುಟುಂಬವು ಛಿದ್ರವಾಗುತ್ತದೆ, ಸಂಸ್ಥೆಯು ಅರಾಜಕವಾಗುತ್ತದೆ, ಸಮಾಜವು ಭ್ರಷ್ಟವಾಗುತ್ತದೆ, ನೀತಿಯು ಅವನತಿ ಹೊಂದುತ್ತದೆ, ಧರ್ಮವು ವ್ಯಾಪಾರವಾಗುತ್ತದೆ, ರಾಜಕೀಯ ಹುಚ್ಚಾಸ್ಪತ್ರೆಯಾಗುತ್ತದೆ.

(ಬರಹ: ಸ್ವಾಮಿ ನಿತ್ಯಸ್ಥಾನಂದ)